# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ನರಸಿಂಹರಾಜ.ವೃತ್ತ, ಬೆಂಗಳೂರು – 560 002

ಸಂಖ್ಯೆ: ಮು.ಆ/ಪಿಆರ್/ 414 /22-23 ದಿನಾಂಕ: 28.3.23

## ಕಛೇರಿ ಆದೇಶ

ವಿಷಯ: ಮಂಜೂರಾತಿ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣದ ತಡೆಗೆ ಹಾಗೂ ವಿವಿಧ ಅಧಿಕಾರಿಗಳ ಜವಬ್ದಾರಿ ಮತ್ತು ಅವುಗಳ ನಿರ್ವಹಣೆಯಲ್ಲಿ ವಿಫಲರಾಗುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮದ ಮಾರ್ಗಸೂಚಿ.

ಉಲ್ಲೇಖ: 1) ಕಛೇರಿ ಆದೇಶ ಸಂಖ್ಯೆ. ಮು.ಆ/ಪಿಆರ್/43/22-23, ದಿನಾಂಕ:21-07-2022.
2) ಕಛೇರಿ ಆದೇಶ ಸಂಖ್ಯೆ. ಬಿಬಿಎಂಪಿ.ಪ್ರ.ಆ/ಪಿಆರ್/958/22-23, ದಿನಾಂಕ:18.03.2023

* * * * * *

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡ ಉಪವಿಧಿ ಹಾಗೂ ಮಂಜೂರಾತಿ ನಕ್ಷೆ ಉಲ್ಲಂಘಿಸಿ ಮತ್ತು ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ವಿರುದ್ಧ ಕೆ.ಎಂ.ಸಿ. ಕಾಯ್ದೆ ಕಲಂ 321ರ ಹಾಗೂ ಪ್ರಸ್ತುತ ಬಿಬಿಎಂಪಿ ಕಾಯ್ದೆ 2020 ರ ಕಲಂ 248 ರ ಅಡಿಯಲ್ಲಿ ಕಾನೂನು ಕ್ರಮ ಜರುಗಿಸುವ ಸಂಬಂಧ ವಿವಿಧ ಅಧಿಕಾರಿಗಳ ಜವಬ್ದಾರಿ ಮತ್ತು ಅವುಗಳ ನಿರ್ವಹಣೆಯಲ್ಲಿ ವಿಫಲರಾಗುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮದ ಮಾರ್ಗಸೂಚಿಯನ್ನು ಉಲ್ಲೇಖದ ಆದೇಶದಲ್ಲಿ ತಿಳಿಸಲಾಗಿರುತ್ತದೆ.

ಬಿಬಿಎಂಪಿ ಕಾಯ್ದೆ 2020 ರ ಕಲಂ 248 ರ ಅಡಿಯಲ್ಲಿ ಕಲ್ಪಿಸಿರುವ ಅವಕಾಶದಂತೆ ಮಂಜೂರಾತಿ ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣದ ತಡೆಗೆ ಸಂಬಂಧಪಟ್ಟಂತೆ ಉಲ್ಲೇಖದ ಆದೇಶದಲ್ಲಿ ಒಟ್ಟಾರೆಯಾಗಿ ಅನಧಿಕೃತ ನಿರ್ಮಾಣಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿದ್ದು, ಅವುಗಳು ಈ ಕೆಳಕಂಡಂತಿರುತ್ತದೆ.

I. ನಕ್ಷೆ ಮಂಜೂರಾತಿ ಪಡೆದು ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣವಾಗುವ ಕಟ್ಟಡಗಳು (ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವವರೆವಿಗೂ)

II. ಸ್ವಾಧೀನಾನುಭವ ಪ್ರಮಾಣಪತ್ರ ಪಡೆದ ನಂತರ, ನಕ್ಷೆ ಉಲ್ಲಂಘನೆ ಮಾಡಿ ಹೆಚ್ಚುವರಿಯಾಗಿ / ವ್ಯತಿರಿಕ್ತವಾಗಿ ನಿರ್ಮಾಣವಾಗುವ ಕಟ್ಟಡಗಳು

III. ನಕ್ಷೆ ಮಂಜೂರಾತಿ ಪಡೆಯದೇ ಅನಧಿಕೃತವಾಗಿ ನಿರ್ಮಾಣವಾಗುವ ಕಟ್ಟಡಗಳು

ಮೇಲ್ಕಂಡ ಮೂರು ವರ್ಗಗಳ ಪೈಕಿ ಪ್ರವರ್ಗ – I ರಲ್ಲಿ **ನಕ್ಷೆ ಮಂಜೂರಾತಿ ಪಡೆದು ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣವಾಗುವ ಕಟ್ಟಡಗಳ (ಕಟ್ಟಡ ನಿರ್ಮಾಣ ಪೂರ್ಣಗೊಂಡು ಕಟ್ಟಡಕ್ಕೆ ಸ್ವಾಧೀನಾನುಭವ ಪ್ರಮಾಣಪತ್ರ ಪಡೆಯುವವರೆವಿಗೂ)** ಬಗ್ಗೆ ಕಾನೂನು ಕ್ರಮ ಜರುಗಿಸುವ ಸಂಬಂಧ ನಗರ ಯೋಜನಾ ಶಾಖೆಯಲ್ಲಿ ಕಾರ್ಯನಿರ್ವಹಿಸುವ ವಿವಿಧ ಅಧಿಕಾರಿಗಳಿಗೆ ಹಾಗೂ ಪ್ರವರ್ಗ 2 & 3 ರ ಅಡಿಯಲ್ಲಿ ಬರುವ ಕಟ್ಟಡಗಳ ಬಗ್ಗೆ ತಾಂತ್ರಿಕ ಶಾಖೆಯಿಂದ ಕ್ರಮಕೈಗೊಳ್ಳಲು ಉಲ್ಲೇಖ (1)ರ ಮಾರ್ಗಸೂಚಿಯಲ್ಲಿ ಕರ್ತವ್ಯ ನಿರ್ವಹಿಸಲು ಆದೇಶಿಸಲಾಗಿರುತ್ತದೆ.

ಇತ್ತೀಚೆಗೆ ಅನಧಿಕೃತ ನಿರ್ಮಾಣಗಳು ಹಾಗೂ ಅನುಮೋದಿತ ನಕ್ಷೆ ಉಲ್ಲಂಘನೆ ಮಾಡಿ ನಿರ್ಮಾಣವಾದ ಬಗ್ಗೆ ಸಾರ್ವಜನಿಕರಿಂದ ಹೆಚ್ಚಿನ ದೂರುಗಳು ಸ್ವೀಕೃತವಾಗುತ್ತಿವೆ. ಇದಕ್ಕೆ ಕಾರಣ ಉಲ್ಲಂಘನೆ / ಅನಧಿಕೃತ ನಿರ್ಮಾಣಗಳನ್ನು ಪರಿಣಾಮಕಾರಿಯಾಗಿ ತಡೆಯಲು ವಿಫಲವಾಗುತ್ತಿರುವುದು ಕಾರಣವಾಗಿರುತ್ತದೆ.

ಪ್ರಸ್ತುತ ಕೇಂದ್ರ ಹಾಗೂ ವಲಯ ಕಛೇರಿಯ ನಗರ ಯೋಜನಾ ಶಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಸೀಮಿತ ಸಂಖ್ಯೆಯಲ್ಲಿ ಇದ್ದು, ಹಾಗೂ ಅವರ ಕಾರ್ಯವ್ಯಾಪ್ತಿಗಳ ಪ್ರದೇಶಗಳು ಹೆಚ್ಚಿರುತ್ತದೆ. ಪ್ರತಿ ವಲಯದಲ್ಲಿ 3-6 ವಿಧಾನಸಭಾ ಕ್ಷೇತ್ರಗಳು ಇದ್ದು, ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಕನಿಷ್ಠ 6 ರಿಂದ 8 ಸಂಖ್ಯೆಯ ವಾರ್ಡ್‌ಗಳ ವ್ಯಾಪ್ತಿ ಹೊಂದಿರುತ್ತದೆ. ವಲಯವಾರು ನಗರ ಯೋಜನಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ 2 ರಿಂದ 3 ಮಾತ್ರ ಇರುವುದರಿಂದ ಹಾಲಿ ನಿರ್ವಹಿಸುವ ಕೆಲಸ ಕಾರ್ಯಗಳ ಜೊತೆಗೆ ಉಲ್ಲೇಖದ ಆದೇಶದಲ್ಲಿನ ಪ್ರವರ್ಗ-I ರಲ್ಲಿ ಸೂಚಿಸಿರುವ ಕೆಲಸ ಕಾರ್ಯಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ.



Scanned with AnyScanner
Generated from eOffice by MANJUNATHA V, BBMP-DCIO(MNV)I/C, DEPUTY CHIEF INFORMATION OFFICER (IT), BRUHAT BENGALURU MAHANAGARA PALIKE on 12/02/2025 04

ಆದರೆ, ವಾರ್ಡ್ ಮಟ್ಟದಲ್ಲಿ ಸಹಾಯಕ ಅಭಿಯಂತರರು / ಕಿರಿಯ ಅಭಿಯಂತರರು ಪ್ರತಿ ವಾರ್ಡ್‌ಗೆ ಒಬ್ಬರಂತೆ ಕಾರ್ಯ ನಿರ್ವಹಿಸುತ್ತಿದ್ದು, ಅವರುಗಳು ಕಾರ್ಯವ್ಯಾಪ್ತಿ ಒಂದು ವಾರ್ಡ್‌ಗೆ ಸೀಮಿತವಾಗಿದ್ದು, ಕಾರ್ಯ ಕ್ಷೇತ್ರ ಕಡಿಮೆಯಿದ್ದು, ಅವರುಗಳಿಗೆ ವಾರ್ಡ್‌ನ ಕಾರ್ಯ ಚಟುವಟಿಕೆಗಳ ಬಗ್ಗೆ ಹೆಚ್ಚಿನ ಮಾಹಿತಿ ಇರುತ್ತದೆ.

ಮುಂದುವರೆದಂತೆ ಉಲ್ಲೇಖ (2) ರ ಆದೇಶದಲ್ಲಿ ಬಿಬಿಎಂಪಿ ಕಾಯ್ದೆ ಕಲಂ 356 ರಡಿಯಲ್ಲಿ ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ನಿರ್ಮಿಸಲಾದ ಕಟ್ಟಡದ ಭಾಗಗಳನ್ನು ಒಡೆದು ಹಾಕಲು ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಅಭಿಯಂತರರುಗಳಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ.

ಹಾಗಾಗಿ ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

ನಗರ ಯೋಜನೆ ಶಾಖೆಯ ಸಹಾಯಕ ನಿರ್ದೇಶಕರುಗಳು ಮಂಜೂರಾತಿ ನೀಡುವ ಕಟ್ಟಡಗಳ ನಿರ್ಮಾಣದ ವೇಳೆ ಕಟ್ಟಡದಲ್ಲಿ ಉಲ್ಲಂಘನೆಗಳು ಕಂಡು ಬಂದ ನಂತರ ಬಿಬಿಎಂಪಿ ಕಾಯ್ದೆ 2020 ಕಲಂ 313 ರಡಿಯಲ್ಲಿ ದಾಖಲಾತಿಗಳನ್ನು ಹಾಜರುಪಡಿಸುವಂತೆ ತಿಳಿಸಿ, ತದನಂತರ ಅವರಿಗೆ 248(1) ರಡಿಯಲ್ಲಿ ನೋಟಿಸ್ ನೀಡಿದ ನಂತರ ಕಟ್ಟಡ ಕಾಮಗಾರಿ ಮುಂದುವರೆಯದಂತೆ ತಡೆಯುವಲ್ಲಿ ಸಂಬಂಧಪಟ್ಟ ಆಯಾ ವಾರ್ಡ್‌ನ ಕಿರಿಯ / ಸಹಾಯಕ ಅಭಿಯಂತರರಿಗೆ ಅದರ ಮಾಹಿತಿ ನೀಡಿ ಕಾಮಗಾರಿಗಳು ನಡೆಯದಂತೆ ನಿಗಾ ವಹಿಸುವಂತೆ ಸೂಚನೆ ನೀಡುವುದು.

ಸಂಬಂಧಪಟ್ಟ ಆಯಾ ವಾರ್ಡ್ ಕಿರಿಯ / ಸಹಾಯಕ ಅಭಿಯಂತರರು ಸದರಿ ಕಾಮಗಾರಿ ಮುಂದುವರೆಯದಂತೆ ನಡೆಯದಂತೆ ನಿಗಾ ವಹಿಸುವುದು.

ನಗರ ಯೋಜನೆ ಶಾಖೆಯ ಸಹಾಯಕ ನಿರ್ದೇಶಕರುಗಳು ಉಲ್ಲೇಖ (2) ರ ಆದೇಶದಂತೆ ಕಾರ್ಯಪಾಲಕ ಅಭಿಯಂತರರು ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಲು ಅಂದಾಜು ಪಟ್ಟಿ ತಯಾರಿಸುವ ಸಂಬಂಧ ಅನುಮೋದಿತ ನಕ್ಷೆ ವಿರುದ್ಧವಾಗಿ ನಿರ್ಮಾಣ ಮಾಡಿರುವ ಉಲ್ಲಂಘನೆ ಭಾಗಗಳನ್ನು ಗುರುತಿಸಿಕೊಡುವ ಮೂಲಕ ಸಹಕಾರ ನೀಡತಕ್ಕದ್ದು ಹಾಗೂ ತೆರವುಗೊಳಿಸುವ ಸಂಧರ್ಭದಲ್ಲಿ ಕಾರ್ಯಪಾಲಕ ಅಭಿಯಂತರರು ಕೋರುವ ಸಹಕಾರ ನೀಡತಕ್ಕದ್ದು.

ನಕ್ಷೆ ಮಂಜೂರಾತಿ ಉಲ್ಲಂಘಿತ ಕಟ್ಟಡದ ಭಾಗವನ್ನು ತೆರವುಗೊಳಿಸಲು ಕೈಗೊಳ್ಳುವ ಪ್ರಕ್ರಿಯೆಯನ್ನು ಅಂತಿಮಗೊಳಿಸಿ, ಕಾನೂನಿನಡಿ ಅನಧಿಕೃತ ಕಟ್ಟಡ / ಕಟ್ಟಡದ ಭಾಗವನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲು ವಿಫಲರಾಗುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು / ಸಿಬ್ಬಂದಿಗಳ ವಿರುದ್ಧ ಕೆ.ಎಂ.ಸಿ ಕಾಯ್ದೆ ಕಲಂ 321(ಬ) ರಡಿಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 1107 ಎಂಎನ್‌ವೈ 2015 ದಿನಾಂಕ: 16–11–2019 ರಂತೆ ರೂಪಿಸಿರುವ ನಿಯಮ & ಪ್ರಸ್ತುತ ಬಿಬಿಎಂಪಿ ಕಾಯ್ದೆ – 2020ರ ಕಲಂ 252ರ ಅಡಿಯಲ್ಲಿ ಅಗತ್ಯ ದಂಡ ವಿಧಿಸಿ ಅವರನ್ನು ಅಮಾನತ್ತಿನಲ್ಲಿಟ್ಟು ಇಲಾಖಾ ವಿಚಾರಣೆ ನಡೆಸಿ ಸೂಕ್ತ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1) ಮಾನ್ಯ ಆಡಳಿತಗಾರರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
2) ವಿಶೇಷ ಆಯುಕ್ತರು (ಯೋಜನೆ) / ಆಡಳಿತ ರವರ ಮಾಹಿತಿಗಾಗಿ ಸಲ್ಲಿಸಿದೆ.
3) ವಲಯಗಳ ಆಯುಕ್ತರು (ಪೂರ್ವ ವಲಯ/ ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ರಾಜರಾಜೇಶ್ವರಿನಗರ ವಲಯ / ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4) ಮುಖ್ಯ ನಗರ ಯೋಜಕರು, ಬಿಬಿಎಂಪಿ ರವರ ಮಾಹಿತಿಗಾಗಿ

Scanned with AnyScanner



Generated from eOffice by MANJUNATHA V, BBMP-DCIO(MNV)I/C, DEPUTY CHIEF INFORMATION OFFICER (IT), BRUHAT BENGALURU MAHANAGARA PALIKE on 12/02/2025

5) ಜಂಟಿ ಆಯುಕ್ತರು (ಪೂರ್ವ ವಲಯ/ ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ರಾಜರಾಜೇಶ್ವರಿನಗರ ವಲಯ / ಬೊಮ್ಮನಹಳ್ಳಿ ವಲಯ) ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
6) ಉಪ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ
7) ಅಪರ ನಿರ್ದೇಶಕರು (ನಗರ ಯೋಜನೆ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
8) ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ ಮತ್ತು ದಕ್ಷಿಣ) ರವರುಗಳ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
9) ಮುಖ್ಯ ಅಭಿಯಂತರರು (ಪೂರ್ವ ವಲಯ/ ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ರಾಜರಾಜೇಶ್ವರಿನಗರ ವಲಯ / ಬೊಮ್ಮನಹಳ್ಳಿ ವಲಯ) ರವರುಗಳ ಸೂಕ್ತ ಕ್ರಮಕ್ಕಾಗಿ
10) ಎಲ್ಲಾ ವಿಭಾಗಗಳ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ
11) ಸಹಾಯಕ ನಿರ್ದೇಶಕರು (ನಗರ ಯೋಜನೆ) (ಪೂರ್ವ ವಲಯ/ ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ರಾಜರಾಜೇಶ್ವರಿನಗರ ವಲಯ / ಬೊಮ್ಮನಹಳ್ಳಿ ವಲಯ) ರವರುಗಳ ಸೂಕ್ತ ಕ್ರಮಕ್ಕಾಗಿ
12) ಎಲ್ಲಾ ಉಪ–ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳ ಸೂಕ್ತ ಕ್ರಮಕ್ಕಾಗಿ.
13) ಸಂಬಂಧಪಟ್ಟ ವಾರ್ಡ್‌ನ ಅಭಿಯಂತರರು ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14) ಕಛೇರಿ ಪ್ರತಿ

Scanned with AnyScanner



Generated from eOffice by MANJUNATHA V, BBMP-DCIO(MNV)I/C, DEPUTY CHIEF INFORMATION OFFICER (IT), BRUHAT BENGALURU MAHANAGARA PALIKE on 12/02/2025 04